ಕೊಲೆ ವಿಚಾರ ಬಂದಾಗ, ಯಾವುದೇ ರಾಷ್ಟ್ರದ್ರೋಹಿ ಈ ದೇಶದಲ್ಲಿ ಈ ಕೃತ್ಯವನ್ನು ಮಾಡಿದಾಗ ಅದಕ್ಕೆ ಬಿ.ಜೆ.ಪಿ. ಯವರು ಅವಕಾಶ ಕೊಡುವುದಿಲ್ಲ. ರಾಷ್ಟ್ರದ್ರೋಹಿಗಳನ್ನು "ಟಾಡಾ" ಕಾಯಿದೆಯನ್ವಯ ಬಂಧಿಸಿ ಎಂದು ಹೇಳಿದ್ದು ನಿಜ. ಈ ದಿಕ್ಕಿನಲ್ಲಿ ಸರ್ಕಾರ ಏನಾದರೂ ಅವರ ಬಗ್ಗೆ ಗಮನ ಕೊಟ್ಟಿದ್ದರೆ ನಮಗೆ ಗೊತ್ತಿಲ್ಲ. ಸರ್ದಾರ್ ವಲ್ಲಬಾಯಿ ಪಟೇಲ್‌ರವರ ಪ್ರತಿಮೆಯ ಅನಾವರಣದ ವಿಚಾರದಲ್ಲೂ ಕೂಡ ರಾಜಕೀಯ ನಡೆಯುತ್ತಿರುವ ಈ ಒಂದು ದುಷ್ಕೃತ್ಯವನ್ನು ರಾಜ್ಯ ಸರ್ಕಾರ ಇವತ್ತು ಖಂಡನೆ ಮಾಡುತ್ತಿಲ್ಲ. ಇದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಬಿ.ಜೆ.ಪಿ.ಯ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ : ಅಧ್ಯಕ್ಷರೆ, ತಾವು ಈಗಾಗಲೇ ಸೂಚಿಸಿರುವಂತೆ ಬೇರೆ ಏನೂ ಹೇಳುವುದಕ್ಕೆ ಹೋಗುವುದಿಲ್ಲ. ನನ್ನ ಮನಸ್ಸಿನಲ್ಲಿರುವ ವಿಚಾರವನ್ನು ತಮ್ಮ ಕೊಠಡಿಯಲ್ಲಿ ಹೇಳಿಬಿಡುತ್ತೇನೆ. ಏಕೆಂದರೆ ಈ ವಿಷಯ ತಮ್ಮಲ್ಲಿ ಇರಬೇಕು. ಅವಿಶ್ವಾಸ ನಿರ್ಣಯದ ಪ್ರಸ್ತಾವದ ಮೇಲೆ ಕಾಂಗ್ರೆಸ್‌ನವರು ಮತ್ತು ಬಿಜೆಪಿಯವರು ಸಪೋರ್ಟ್ ಮಾಡುತ್ತಿದ್ದಾರೆ. ಇವರಿಬ್ಬರೂ ಸೇರಿ ಈ ಅವಿಶ್ವಾಸ ನಿರ್ಣಯವನ್ನು ಇಲ್ಲಿ ಮಂಡಿಸಿದ್ದಾರೆ. ಈಗ ನಾನು ಮಾತನಾಡಿದರೆ ಅವರಿಗೆ ಬಹಳ ನೋವು ಆಗುತ್ತದೆ.

(ಗೊಂದಲ)

ಮಾನ್ಯ ಜೆ.ಹೆಚ್. ಪಟೇಲ್‌ರವರು, ಬಹಳ ಒಳ್ಳೆಯ ಸೆಕ್ಯುಲರ್, ಸೋಷಿಯಲಿಸ್ಟ್ ಆಗಿದ್ದಾರೆ. ಅವರು ಒಳ್ಳೆಯ ಕೆಲಸಗಳನ್ನು ಮಾಡುವವರಿದ್ದಾರೆ. ನಾನು ಏನು ಸಲಹೆ ಕೊಟ್ಟಿದ್ದೇನೆ ಅದನ್ನು ತಾವು ಗಮನದಲ್ಲಿಟ್ಟುಕೊಂಡು ತಾವು ಸರಿಪಡಿಸಿಕೊಳ್ಳುತ್ತಿರೆಂದು ಆಶಿಸುತ್ತೇನೆ. ನನಗೆ ಮತ್ತೊಂದು ಸಲ ಮಾತನಾಡಲು ಅವಕಾಶ ಕೊಡಬೇಕು. ಬಿ.ಜೆ.ಪಿ.ಯವರು ನಿಮಗೆ ವಿರುದ್ಧವಾಗಿ ಮಾತನಾಡುತ್ತಿದ್ದಾರೆ, ಅವರ ಮಾತಿಗೆ ನೀವು ಬೆಂಡ್ ಆಗಬೇಡಿ. ಜಾತ್ಯಾತೀತ ಪಾರ್ಟಿ ವಿರುದ್ಧ ತಾವು ಇದ್ದೀರಿ ಎಂದರೆ ಅದಕ್ಕೆ ನಮ್ಮ ಎಲ್ಲಾ ಸಹಕಾರ ಆಗಲೂ ಇದೆ, ಈಗಲೂ ಕೂಡ ಇದೆ. ಇಷ್ಟು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ನಾಳೆ ಬೆಳಿಗ್ಗೆ 12-15ಕ್ಕೆ ಸಮಾವೇಶಗೊಳ್ಳಲಿದೆ. ಎಲ್ಲರಿಗೂ ನಮಸ್ಕಾರ.

(ಸದನವು ಸಂಜೆ ಎಂಟು ಗಂಟೆಗೆ ಮುಕ್ತಾಯಗೊಂಡು ಪುನಃ ದಿನಾಂಕ 5ನೇ ನವೆಂಬರ್ ಮಾಹೆ 1998ರ ಗುರುವಾರದಂದು ಮಧ್ಯಾಹ್ನ 12-15 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆಯನ್ನು ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಕಾಸೂ. 7444 ಸ. ಶಾ. ಮು. ತುಮಕೂರು 350 ಪ್ರತಿಗಳು ದಿ: 13-12-2000